





## ಹೆಲಿಕಾಪ್ಟರ್ ತಯಾರಕ!

ಮಕ್ಕಳ ಹೆಲಿಕಾಪ್ಟರ್ ತಯಾರಿಕೆಯಲ್ಲೂ ಸೈಫಿ ವಿಲಿಯಂ ಕೈಚಳ ತೋರಿಸಿದ್ದಾರೆ. ಇಟಲಿಯಲ್ಲೇ ಹೆಲಿಕಾಪ್ಟರ್ ತಯಾರಿಕೆ ಆರಂಭಿಸಿದ ಅವರು ಶ್ರೀಮಂತ ಉದ್ಯಮಿಗಳ ಮಕ್ಕಳಿಗೆ ಹೆಲಿಕಾಪ್ಟರ್ ಮಾಡಿ ಕೊಟ್ಟಿದ್ದಾರೆ. ಭಾರತದಲ್ಲೂ ಅವರು ಮಾಡಿದ ಏಳೆಂಟು ಹೆಲಿಕಾಪ್ಟರ್‌ಗಳು ಹಾರುತ್ತಿವೆ.

ಅಲ್ಲಿನ ಒಂದೇ ಷೋದಲ್ಲಿ 26 ಕಾರುಗಳಲ್ಲಿ ಸಾಹಸ ಮಾಡಿದ್ದಿದೆ! ತಾವೇ ರೂಪಿಸಿದ ಕಾರುಗಳೊಂದಿಗೆ ಅವರು ಅಖಾಡಕ್ಕಿಳಿಯುತ್ತಿದ್ದರು. ಸ್ಟಂಟ್ ಕಾರ್ ಸರ್ಕಸ್ ವಿಶ್ವದೆಲ್ಲೆಡೆ ಪ್ರಸಿದ್ಧಿ ಪಡೆದಿತ್ತು. ಕಾರು ತಯಾರಿಕೆ ಬಗ್ಗೆ ವಿಶೇಷ ಜ್ಞಾನ ಹೊಂದಿದ್ದ ಸೈಫಿಯನ್ನು ಕರೆದು ಇಟಲಿಯ ಫೆರಾರಿ ಕಂಪೆನಿ ಉದ್ಯೋಗ ಕೊಟ್ಟಿತ್ತು. ಅಲ್ಲಿಂದ ಸೈಫಿ ಕಾರ್ ಮೆಕ್ಯಾನಿಕ್ ಆದರು. ಶ್ರೀಮಂತರ ಐಷಾರಾಮಿ ಕಾರು ರೂಪಿಸಿದರು. ಜೀಪುಗಳ ಚಿತ್ರಣ ಬದಲಿಸಿದರು. ಫೆರಾರಿ ಕಂಪೆನಿಯಲ್ಲಿ ಸೈಫಿ 50 ಮಂದಿ ತಂತ್ರಜ್ಞರಿಗೆ ನಾಯಕರಾಗಿದ್ದರು.

### ತಾಯಿಯೇ ಗುರು!

ಸೈಫಿ ಅವರ ತಾಯಿ ಹಶ್ಮಿತ್ ಮುಂಬೈ ಮೂಲದ 'ಮೊಹಮ್ಮದ್ ಸಾಬ್ ಸರ್ಕಸ್ ಕಂಪನಿ' ನಡೆಸುತ್ತಿದ್ದರು. ಬೈಕ್ ಸಾಹಸದಲ್ಲಿ ಪ್ರಸಿದ್ಧಿ ಪಡೆದಿದ್ದ ಅವರು 'ಭಾರತದ ಮೊದಲ ಮಹಿಳಾ ಬೈಕ್ ಸ್ಟಂಟ್ ಮಾಸ್ಟರ್' ಎಂದೇ ಹೆಸರು ಪಡೆದಿದ್ದರು. ಕಂಪನಿಯಲ್ಲಿದ್ದ ಮತ್ತೊಬ್ಬ ಬೈಕ್ ಸಾಹಸಿ ವಿಲಿಯಂ ಅವರನ್ನೇ ಹಶ್ಮಿತ್ ಮದುವೆಯಾದರು. ಕಂಪನಿ ಅಸ್ಸಾಂನಲ್ಲಿ ಪ್ರದರ್ಶನ

(42ನೇ ಪುಟ ನೋಡಿ)